# ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ

**ಸಿಸಿ ಸಂಖ್ಯೆ: 258/2024**

ಚಾ.ಸಾ–01, ಪ್ರಾ.ಸಾ–01

| | | |
|---|---|---|
| ಹೆಸರು | : | ನಾಗಮ್ಮ |
| ಗಂಡನ ಹೆಸರು | : | ರಾಜೇಶ್ |
| ವಯಸ್ಸು | : | 35 |
| ವೃತ್ತಿ | : | ಖಾಸಗಿ ಕೆಲಸ |
| ವಾಸ | : | ಚಿದರವಳ್ಳಿ ಗ್ರಾಮ, ತಿ. ನರಸೀಪುರ ತಾಲ್ಲೂಕು |

**ದಿನಾಂಕ 25.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಚಾಸಾ–2 ನನ್ನ ತಾಯಿ. ಚಾಸಾ–3 ರಿಂದ 5 ರವರ ಪರಿಚಯವಿದೆ. ಈ ದಿನ ನ್ಯಾಯಾಲಯದಲ್ಲಿರುವ 1, 2 ಮತ್ತು 4ನೇ ಆರೋಪಿತರ ಪರಿಚಯವಿದೆ. ಈ ದಿನ ನ್ಯಾಯಾಲಯದಲ್ಲಿ ಗೈರುಹಾಜರಾಗಿರುವ 3ನೇ ಆರೋಪಿತಳ ಪರಿಚಯವಿದೆ. ಆಕೆಯನ್ನು ನೋಡಿದರೆ ಗುರುತಿಸುತ್ತೇನೆ. ಆಕೆಯ ಗುರುತಿಸುವಿಕೆಯ ಸಂಬಂಧ ಅವರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ.

2023 ರ ಒಂದು ತಿಂಗಳಿನ ದಿನಾಂಕ 23 ರಂದು ಬೆಳಿಗ್ಗೆ 8.30 ಗಂಟೆಗೆ ನನ್ನ ತಾಯಿ ಮನೆಯ ಮುಂದೆ, ನನ್ನ ತಾಯಿ ನನ್ನ ದೊಡ್ಡಪ್ಪನ ಮಗ ಚಾಸಾ–3 ರವರೊಂದಿಗೆ ಮಾತನಾಡುತ್ತಿದ್ದಾಗ ನಾನು ಗಾರ್ಮೆಂಟ್ಸ್‌ಗೆ ಹೋಗಲು ನನ್ನ ತಾಯಿಗೆ ಹೇಳಲು ಮನೆಯಿಂದ ಹೊರಗೆ ಬಂದಿದ್ದು, ಆ ವೇಳೆಗೆ 1ನೇ ಆರೋಪಿತ ಮತ್ತು ಆತನ ಹೆಂಡತಿ ಸರಿತಾ ರವರು ಸೇರಿ ನನ್ನ ಜುಟ್ಟನ್ನು ಹಿಡಿದುಕೊಂಡು ಕೆಳಗೆ

ಬಗ್ಗಿಸಿದರು. 1ನೇ ಆರೋಪಿತ ನನ್ನ ಸೀರೆಯನ್ನು ಎತ್ತಿದ್ದು, ನನ್ನ ಎದೆಯ ಮೇಲೆ ಕೈ ಹಾಕಿ, ನನ್ನ ಕುತ್ತಿಗೆ ಮೇಲೆ ಕಾಲನ್ನು ಹಾಕಿರುತ್ತಾನೆ. ಸದರಿ ಸರಿತಾ ರವರು ನನ್ನ ಜುಟ್ಟನ್ನು ಹಿಡಿದು ಹಿಂದಕ್ಕೆ ಬಗ್ಗಿಸಿ, ನನಗೆ ಸರಿಯಾಗಿ ಮಾಡಬೇಕು ಎಂದು ತನ್ನ ಗಂಡನಿಗೆ ಕುಮ್ಮಕ್ಕು ನೀಡಿರುತ್ತಾಳೆ.

ನಂತರ ನನ್ನ ತಾಯಿ ಗಲಾಟೆಯನ್ನು ಬಿಡಿಸಲು ಬಂದಿದ್ದು, 2 ರಿಂದ 4ನೇ ಆರೋಪಿತರು ನನ್ನ ತಾಯಿಯನ್ನು ಹಿಡಿದುಕೊಂಡು ಎಳೆದೊಯ್ದಿರುತ್ತಾರೆ. ಅವರು ತಮ್ಮ ಕೈಗಳಿಂದ ನನ್ನ ತಾಯಿಗೆ ಹೊಡೆದಿರುತ್ತಾರೆ.

1ನೇ ಆರೋಪಿತ ನನಗೆ ಮಾನಭಂಗ ಮಾಡಿ ಸಾಯಿಸುವುದಾಗಿ ಬೆದರಿಕೆ ಹಾಕಿರುತ್ತಾನೆ.

ಘಟನೆಯಲ್ಲಿ ನನಗೆ ಸುಸ್ತಾಗಿದ್ದರಿಂದ ನಾನು ಮನೆಯ ಒಳಗೆ ಹೋಗಿದ್ದು, ಘಟನೆಯ ಮರುದಿನ ತಿ. ನರಸೀಪುರದ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದು, ಅಲ್ಲಿಂದ ಹೆಚ್ಚಿನ ಚಿಕಿತ್ಸೆ ಪಡೆಯಲು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಹೋಗಿದ್ದೆ.

ಘಟನೆಯಾದ ಮೂರು ದಿನಗಳ ನಂತರ ಅಂದರೆ ದಿನಾಂಕ 26 ರಂದು ಪೊಲೀಸರಿಗೆ ದೂರನ್ನು ನೀಡಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.1 ಮತ್ತು 1(ಎ) ಎಂದು ಗುರುತಿಸಲಾಯಿತು.

ದೂರನ್ನು ನೀಡಿದ ಎರಡು ದಿನಗಳ ನಂತರ ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಪೊಲೀಸರು ಘಟನಾ ಸ್ಥಳವನ್ನು ಪರಿಶೀಲನೆ ಮಾಡಿ ಪಂಚನಾಮವನ್ನು ಜರುಗಿಸಿರುತ್ತಾರೆ. ಆ ವೇಳೆಗೆ ಚಾಸಾ-4 ಮತ್ತು 5 ರವರು ಇದ್ದರು. ಪೊಲೀಸರಿಗೆ ಘಟನಾ ಸ್ಥಳವನ್ನು ನಾನು ಮತ್ತು ಚಾಸಾ-2 ರವರು ತೋರಿಸಿರುತ್ತೇವೆ.

ಪಂಚನಾಮವನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.2 ಮತ್ತು 2(ಎ) ಎಂದು ಗುರುತಿಸಲಾಯಿತು.

ದಿನಾಂಕ 05.12.2023 ರಂದು ಪೊಲೀಸರು ನನ್ನನ್ನು ನ್ಯಾಯಾಲಯಕ್ಕೆ ಕರೆತಂದಿದ್ದು, ನಾನು ನನ್ನ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನೀಡಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.3 ಮತ್ತು 3(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

1ನೇ ಆರೋಪಿತ ಮತ್ತು ಆತನ ಹೆಂಡತಿ ಸರಿತಾ ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. 1ನೇ ಆರೋಪಿತ ತನ್ನ ಕೈಯಿಂದ ನನ್ನ ಎದೆಗೆ ಗುದ್ದಿರುತ್ತಾನೆ ಎಂದರೆ ಸರಿ.

**ಪಾಟೀ ಸವಾಲು : ಶ್ರೀ ಬಿ.ಆರ್. ವಕೀಲರಿಂದ ಆರೋಪಿತರ ಪರವಾಗಿ :**

ನಾನು 8ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ, ಸ್ವಲ್ಪ ಸ್ವಲ್ಪ ಬರುತ್ತದೆ. ದೂರನ್ನು ಯಾರು ಬರೆದರು ಎಂದರೆ ಪೊಲೀಸ್ ಠಾಣೆಯಲ್ಲಿ ಇದ್ದ ಸಾರ್ವಜನಿಕರಿಂದ ಬರೆಸಿದ್ದು, ಅವರು ಯಾರು ಎಂದು ನನಗೆ ಗೊತ್ತಿಲ್ಲ.

ನಾನು ಚಿದರವಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ನಾನು ಗಾರ್ಮೆಂಟ್ಸ್‌ಗೆ ಕೆಲಸಕ್ಕೆ ಹೋಗುತ್ತೇನೆ ಎಂದರೆ ಸರಿ. ಚಿದರವಳ್ಳಿಯಿಂದ ಆಟೋದಲ್ಲಿ ಗಾರ್ಮೆಂಟ್ಸ್ ಕೆಲಸಕ್ಕೆ ಹೋಗುತ್ತಿದ್ದೆ. ಕೆಲವು ವೇಳೆ ನನ್ನ ತಾಯಿಯ ಮನೆಯಿಂದ ಆ ಕೆಲಸಕ್ಕೆ ಆಟೋದಲ್ಲಿ ಹೋಗುತ್ತಿದ್ದೆ. ಚಿದರವಳ್ಳಿಯಿಂದ ಬೆಳಿಗ್ಗೆ 8.00 ಗಂಟೆಗೆ ಮತ್ತು ನನ್ನ ತಾಯಿಯ ಮನೆಯಿಂದ ಬೆಳಿಗ್ಗೆ 8.30 ಗಂಟೆಗೆ ಆಟೋಗೆ ಹೋಗುತ್ತಿದ್ದೆ. ಗಾರ್ಮೆಂಟ್ಸ್‌ನಲ್ಲಿ ಬೆಳಿಗ್ಗೆ 9.00 ಗಂಟೆಗೆ ಕೆಲಸ ಪ್ರಾರಂಭವಾಗುತ್ತದೆ.

ಘಟನೆಯಾದ ದಿನದಿಂದ 4-5 ದಿನಗಳ ಪೂರ್ವದಲ್ಲಿ ನಾನು ನನ್ನ ತಾಯಿಯ ಮನೆಗೆ ಬಂದಿದ್ದೆ. ನನ್ನ ತಾಯಿ ಮತ್ತು ಚಾಸಾ-3 ರವರು ಮಾತನಾಡುತ್ತಿದ್ದಾಗ, ನಾನು ನನ್ನ ತಾಯಿಯ ಮನೆಯ ಒಳಗೆ ಇದ್ದೆ. ಅಲ್ಲಿಂದ ಘಟನಾ ಸ್ಥಳಕ್ಕೆ ಸುಮಾರು 2 ನಿಮಿಷದಲ್ಲಿ ಬಂದಿರುತ್ತೇನೆ. ಆ ವೇಳೆಗೆ ಬೆಳಿಗ್ಗೆ 8.25 ಗಂಟೆಯಾಗಿತ್ತು.

ನನ್ನ ತಾಯಿಯ ಮನೆಯಿರುವ ಬೀದಿಯಲ್ಲಿಯೇ ಆರೋಪಿತರ ಮನೆಯಿದೆ ಎಂದರೆ ಸರಿ. ಆ ಬೀದಿಯ ಎರಡೂ ಕಡೆ ಸುಮಾರು 8-10 ಮನೆಗಳಿವೆ ಎಂದರೆ ಸರಿ.

ನನ್ನ ತಾಯಿ ನೆರಗ್ಯಾತನಹಳ್ಳಿಯ ಸಿದ್ದರಾಜು, ನಾಗರಾಜು ಮತ್ತು ಸುಭಾಷ್ ರವರ ವಿರುದ್ಧ ಎರಡು ದೂರುಗಳನ್ನು ನೀಡಿದ್ದಾರೆ. ನಾನು ಈ ಪ್ರಕರಣದಲ್ಲಿ ಮಾತ್ರ ದೂರು ನೀಡಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಖರ್ಚಿನ ಮೇರೆಗೆ ಮುಂದೂಡಲಾಯಿತು.**

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**